■ ಹನಿ

## ಶುಮಾಕರ್ ದುರದೃಷ್ಟ

ಮಿಖಾಯಿಲ್ ಶುಮಾಕರ್ ಕ್ರೀಡಾ ಜಗತ್ತು ಕಂಡ ಅತ್ಯಂತ ಪ್ರತಿಭಾನ್ವಿತ ರೇಸರ್. ರೇಸ್ ಕಾರುಗಳ ಡ್ರೈವಿಂಗ್‌ನಲ್ಲಿ ಕಳೆದ 22 ವರ್ಷಗಳಿಂದಲೂ ಪಾರಮ್ಯ ಮೆರೆದು, ಜಗತ್ತಿನ ಅತ್ಯಂತ ವೇಗದ ಚಾಲಕ ಎಂದೆನ್ನಿಸಿಕೊಂಡಿರುವ ಶುಮಾಕರ್, ಈಗ ಜಡವಾಗಿ ಆಸ್ಪತ್ರೆಯ ಹಾಸಿಗೆಯ ಮೇಲೆ ಮಲಗಿದ್ದಾರೆ. ಎರಡು ವಾರಗಳ ಹಿಂದೆ ಮಗನ ಜತೆ ಹಿಮಪರ್ವತದಲ್ಲಿ ಸ್ಕೀಯಿಂಗ್



ಮಾಡುತ್ತಿದ್ದಾಗ ಜಾರಿ ಬಿದ್ದು ತಲೆಗೆ ಏಟು ತಿಂದು ಪ್ರಜ್ಞಾಹೀನರಾಗಿದ್ದಾರೆ. ಸ್ಕೀ ಹೆಲ್ಮೆಟ್ ಧರಿಸಿದ್ದರಿಂದ ಬಿದ್ದಾಗ ಕನಿಷ್ಠ ಪ್ರಾಣವಾದರೂ ಉಳಿದಿದೆ ಎನ್ನುವುದು ವೈದ್ಯರ ಮಾತು. ಈ ಬರಹದ ಹೊತ್ತಿಗೆ ಅವರ ಸ್ಥಿತಿ 'ಚಿಂತಾಜನಕವಾಗಿದ್ದರೂ ಸ್ಥಿರ'ವಾಗಿದೆ.

ಜರ್ಮನಿಯ ಈ ಕಾರ್ ರೇಸಿಗ 7 ಸಲ ಫಾರ್ಮುಲಾ ಒನ್ ವಿಶ್ವ–ಚಾಂಪಿಯನ್ ಆಗಿದ್ದು ಯಾರೂ ಮುಟ್ಟಲಾಗದ ದಾಖಲೆ. ಜೋರ್ಡನ್, ಬೆನೆಟನ್, ಸಫಾರಿ, ಮರ್ಸಿಡಿಸ್– ಹೀಗೆ ಪ್ರಮುಖ ತಂಡಗಳನ್ನು ಪ್ರತಿನಿಧಿಸಿದ್ದಾರೆ. ಜಗತ್ತು ಕಂಡ ಅತ್ಯಂತ ಶ್ರೇಷ್ಠ ಎಫ್1 ಡ್ರೈವರ್‌ಗಳಲ್ಲಿ ಒಬ್ಬರಾಗಿರುವ ಶುಮಾಕರ್, 2004ರಲ್ಲಿ ಒಂದೇ ಸೀಸನ್‌ನಲ್ಲಿ 13 ರೇಸ್‌ಗಳನ್ನು ಗೆದ್ದು ಮಾಡಿದ ವಿಶ್ವದಾಖಲೆಯನ್ನೂ ಈವರೆಗೆ ಯಾರೂ ಮುರಿದಿಲ್ಲ. ಸೀಸನ್‌ನ ಎಲ್ಲ ರೇಸ್‌ಗಳಲ್ಲೂ ಟಾಪ್ 3 ಸ್ಥಾನ ಗಳಿಸಿರುವುದು ಇನ್ನೊಂದು ವಿಶ್ವದಾಖಲೆ. 1991ರಿಂದ ರೇಸ್ ಕಣದಲ್ಲಿದ್ದ ಶುಮಾಕರ್, 2006ರಲ್ಲಿ ನಿವೃತ್ತಿ ಘೋಷಿಸಿದ್ದರು. ಮತ್ತೆ 2010ರಲ್ಲಿ ಮರ್ಸಿಡಿಸ್ ತಂಡದ ಪರವಾಗಿ ಹೆಲ್ಮೆಟ್ ಧರಿಸಿದರು. 2012ರಲ್ಲಿ ಮತ್ತೆ ನಿವೃತ್ತಿ ಪ್ರಕಟಿಸಿದರು. ಇಬ್ಬರು ಮಕ್ಕಳ ಸಂತೃಪ್ತ ಸಂಸಾರ ಹೊಂದಿದ್ದ ಶುಮಾಕರ್ ಪ್ರಸಿದ್ಧ ರೇಸಿಗರ ಸಲಹೆಗಾರರಾಗಿಯೂ ಕೆಲಸ ಮಾಡುತ್ತಿದ್ದರು. 2004ರಲ್ಲಿ ವಿಶ್ವದ ಅತ್ಯಧಿಕ ಸಂಭಾವನೆ ಪಡೆಯುವ ವಿಶ್ವದ ಎರಡನೇ ಅಥ್ಲೀಟ್ ಎಂಬ ಖ್ಯಾತಿ ಪಡೆದಿದ್ದ ಶುಮಾಕರ್ (ಆಗ ಅವರ ಸಂಬಳ ತಿಂಗಳಿಗೆ 8 ಕೋಟಿ ಡಾಲರ್) ವಿಶ್ವದ ಮೊದಲ ಶತಕೋಟ್ಯಾಧೀಶ ಅಥ್ಲೀಟ್ ಎಂಬ ಖ್ಯಾತಿಯನ್ನೂ ಪಡೆದಿದ್ದರು.

ವೇಗ ಮನುಷ್ಯನನ್ನು ಕೊಲ್ಲುತ್ತದೆ ಎನ್ನುವುದು ಟ್ರಾಫಿಕ್ ಪೊಲೀಸರ ಹಳೇ ಸ್ಲೋಗನ್. ಆದರೆ ಸ್ಕೀಯಿಂಗ್ ಮಾಡುವಾಗ ಶುಮಾಕರ್ ಸಾಧಾರಣ (20 ಕಿ.ಮೀ) ವೇಗದಲ್ಲಿ ಇದ್ದರಂತೆ. ವಿಶ್ವಸಂಸ್ಥೆಯ ರಾಯಭಾರಿಯಾಗಿ ಅತಿವೇಗದ ಚಾಲನೆಯ ವಿರುದ್ಧ ಅಭಿಯಾನವನ್ನೂ ಮಾಡುತ್ತಿದ್ದ ಶುಮಾಕರ್ ಹೀಗೆ 45ರ ಹರೆಯದಲ್ಲಿ ಅಪಘಾತದಲ್ಲಿ ಏಟು ತಿಂದು ಮಲಗಿರುವುದು ದುರ್ದೈವದ ಸಂಗತಿ. ●



## ರಾಣಿಯ ಮದುವೆ

ಕಳೆದ ಎರಡು ವರ್ಷಗಳಿಂದ ಪತ್ರಕರ್ತರು ರಾಣಿ ಮುಖರ್ಜಿಯ ಮದುವೆಯ ಸುದ್ದಿ ಬರೆದದ್ದೇ ಬಂತು; ಮುಹೂರ್ತ ಕೂಡಿ ಬರಲಿಲ್ಲ. ಆದರೆ ಈಗ ಕೊನೆಗೂ ಫೆಬ್ರುವರಿ 10ಕ್ಕೆ ಮದುವೆ ದಿನಾಂಕ ನಿಶ್ಚಯ–ವಾಗಿದೆಯಂತೆ. ಅಂತೂ 2014ರ ಪ್ರೇಮಿಗಳ ದಿನಕ್ಕೂ ಮುನ್ನ ರಾಣಿಗೆ ಕೊರಳಿಗೆ ತಾಳಿ ಬೀಳುವುದು ಖಚಿತವಾಗಿದೆ.

ಹಾಗೆ ನೋಡಿದರೆ 2010ರಿಂದಲೇ ರಾಣಿ ಮುಖರ್ಜಿ ಮತ್ತು ಆದಿತ್ಯ ಚೋಪ್ರಾ ಜತೆಯಾಗಿ ಓಡಾಡುತ್ತಿದ್ದಾರೆ. ಕಳೆದ ವರ್ಷ ಅವರ ಮದುವೆ ಆಗಿಯೇ ಹೋಯಿತು ಎಂದರು. ಆದರೆ ಆದಿತ್ಯನ ತಂದೆ ಮದುವೆಗೆ ಒಪ್ಪುತ್ತಿಲ್ಲ; ಅದಕ್ಕೇ ತಡವಾಗುತ್ತಿದೆ ಎಂಬ ಸುದ್ದಿ ಬಂತು. ಈ ಮಧ್ಯೆ ಯಶ್ ಚೋಪ್ರಾ ಅವರು ಬಹಳ ವರ್ಷಗಳ ನಂತರ ಚಿತ್ರನಿರ್ಮಾಣಕ್ಕೆ ಮರಳಿ 'ಜಬ್ ತಕ್ ಹೈ ಜಾನ್' ನಿರ್ಮಿಸಿದರು. ಅರ್ಧದಲ್ಲೇ ಅವರ ಆರೋಗ್ಯ ಕೈಕೊಟ್ಟು, ಅವರ ಸಾವೂ ಸಂಭವಿಸಿತು. ರಾಣಿ ಕಾಯುವುದು ಅನಿವಾರ್ಯವಾಯಿತು. ಈ ಮಧ್ಯೆ ಆದಿತ್ಯ ತಾಯಿ ಪಮೇಲಾ ಚೋಪ್ರಾ ಅವರಿಗೂ ಈ ಮದುವೆ ಇಷ್ಟವಿಲ್ಲ ಎಂಬ ಸುದ್ದಿ ಬಂತು.

ಆದರೆ ಈಗ ಎಲ್ಲ ಕಾರ್ಮೋಡಗಳು ದೂರ ಸರಿದಿವೆಯಂತೆ. ಕೆಲವು ತಿಂಗಳ ಹಿಂದೆ ಪಮೇಲಾ ಚೋಪ್ರಾರ ಹುಟ್ಟುಹಬ್ಬ ಸ್ವಿಝರ್ಲೆಂಡ್‌ನಲ್ಲಿ ನಡೆದಾಗ ರಾಣಿಯೂ ಹಾಜರಿದ್ದಳು. ಆ ಬಳಿಕ ಮಾಧುರಿ ದೀಕ್ಷಿತ್ ತಾಯಿಯ ನಿಧನದ ಸಂದರ್ಭದಲ್ಲೂ ಪಮೇಲಾ ಜತೆಗೆ ರಾಣಿ ಮತ್ತು ಆಕೆಯ ತಾಯಿ ಒಂದೇ ಕಾರಿನಲ್ಲಿ ಬಂದು ಹೋದರು. ಹಾಗಾಗಿ ಎಲ್ಲವೂ ಸುಸೂತ್ರವಾಗಿದೆ ಎನ್ನುವುದು ಗಟ್ಟಿಯಾಯಿತು.

ರಾಣಿಗೂ ಈಗ 35 ದಾಟಿದೆ. 1997ರಲ್ಲಿ ಚಿತ್ರರಂಗಕ್ಕೆ ಬಂದ ಬಳಿಕ 45ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದೂ ಆಗಿದೆ. ಸಾಕಷ್ಟು ಖ್ಯಾತಿ, ಹಣ, ಗೌರವ ಎಲ್ಲವೂ ಬಂದಿರುವುದರಿಂದ ಇನ್ನು ಮದುವೆ ಆಗಲು ಅಡ್ಡಿಯಿಲ್ಲ ಎನ್ನುವುದು ಆಪ್ತೇಷ್ಟರ ಒತ್ತಾಯವಂತೆ. ಜೋಧ್‌ಪುರದ ಉಮೇದ್ ಭವನದ ಅರಮನೆಯನ್ನು ರಾಣಿ ನೋಡಿ ಬಂದು ಅದಾಗಲೇ ಬುಕ್ ಮಾಡಿದ್ದೂ ಆಗಿದೆಯಂತೆ! ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65